ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಬಿಡುಗಡೆ ಮಾಡಿರುವ ಅನುದಾನ

936 (1299) ಶ್ರೀ ಸುಭಾಷ್ ಆರ್. ಗುತ್ತೇದಾರ್ (ಆಳಂದ) : ಮಾನ್ಯ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಡಾ. ನಂಜುಂಡಪ್ಪ ವರದಿಯನ್ವಯ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಕಳೆದ ಮೂರು ವರ್ಷಗಳಲ್ಲಿ ಗುಲ್ಬರ್ಗಾ ಜಿಲ್ಲೆಗೆ ಬಿಡುಗಡೆ ಮಾಡಿರುವ ಅನುದಾನದ ಮೊತ್ತ ಎಷ್ಟು; (ತಾಲ್ಲೂಕುವಾರು ವಿವರಗಳನ್ನು ನೀಡುವುದು);

ಆ) ಈ ಅನುದಾನದಲ್ಲಿ ಇಲಾಖೆಯು ಯಾವ ಯಾವ ಯೋಜನೆಗಳನ್ನು ಕೈಗೊಂಡಿದೆ (ವಿವರಗಳನ್ನು ನೀಡುವುದು);

ಇ) ಸರ್ಕಾರವು ಈ ಇಲಾಖೆಗೆ ಈಗ ನೀಡುತ್ತಿರುವ ಅನುದಾನದ ಮೊತ್ತ ಸಾಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಅನುದಾನವನ್ನು ಹೆಚ್ಚಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಉ) ಆಳಂದ ತಾಲ್ಲೂಕಿನಲ್ಲಿರುವ ಒಟ್ಟು ಆಸ್ಪತ್ರೆಗಳ ಸಂಖ್ಯೆ ಎಷ್ಟು; ಪ್ರಸ್ತುತ ಆಸ್ಪತ್ರೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿ ಮತ್ತು ವೈದ್ಯರುಗಳ ಸಂಖ್ಯೆ ಎಷ್ಟು;

ಊ) ಆಳಂದ ತಾಲ್ಲೂಕಿನಲ್ಲಿರುವ ಆಸ್ಪತ್ರೆಗಳಲ್ಲಿ ವೈದ್ಯರು ಹಾಗೂ ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಋ) ಹಾಗಿದ್ದಲ್ಲಿ, ಕೊರತೆಯಿರುವ ವೈದ್ಯರು ಹಾಗೂ ಸಿಬ್ಬಂದಿಗಳ ಹುದ್ದೆಗಳನ್ನು ತುಂಬಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು (ವಿವರಗಳನ್ನು ನೀಡುವುದು)?

ಡಾ॥ ಮುಮ್ತಾಜ್ ಆಲಿ ಖಾನ್ (ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) :

ಅ) ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಡಾ. ನಂಜುಂಡಪ್ಪ ವರದಿಯನ್ವಯ ಯಾವುದೇ ಪ್ರತ್ಯೇಕ ಅನುದಾನವನ್ನು ಬಿಡುಗಡೆ ಮಾಡಿರುವುದಿಲ್ಲ.

ಆ) –ಉದ್ಭವಿಸುವುದಿಲ್ಲ–

ಇ) –ಉದ್ಭವಿಸುವುದಿಲ್ಲ–

ಈ) –ಉದ್ಭವಿಸುವುದಿಲ್ಲ–

ಉ) ಈ ಇಲಾಖೆಗೆ ಸಂಬಂಧಿಸುವುದಿಲ್ಲ.

ಊ) ಈ ಇಲಾಖೆಗೆ ಸಂಬಂಧಿಸುವುದಿಲ್ಲ.

ಋ) ಈ ಇಲಾಖೆಗೆ ಸಂಬಂಧಿಸುವುದಿಲ್ಲ.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಬಿಡುಗಡೆ ಮಾಡಿರುವ ಅನುದಾನ

937 (1300) ಶ್ರೀ ಸುಭಾಷ್ ಆರ್. ಗುತ್ತೇದಾರ್ (ಅಳಂದ) : ಮಾನ್ಯ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಡಾ. ನಂಜುಂಡಪ್ಪ ವರದಿಯನ್ವಯ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಕಳೆದ ಮೂರು ವರ್ಷಗಳಲ್ಲಿ ಗುಲ್ಬರ್ಗ ಜಿಲ್ಲೆಗೆ ಬಿಡುಗಡೆ ಮಾಡಿರುವ ಅನುದಾನದ ಮೊತ್ತ ಎಷ್ಟು; (ತಾಲ್ಲೂಕುವಾರು ವಿವರಗಳನ್ನು ನೀಡುವುದು);

ಆ) ಈ ಅನುದಾನದಲ್ಲಿ ಇಲಾಖೆಯು ಯಾವ ಯವ ಯೋಜನೆಗಳನ್ನು ಕೈಗೊಂಡಿದೆ (ವಿವರಗಳನ್ನು ನೀಡುವುದು);

ಇ) ಸರ್ಕಾರವು ಈ ಇಲಾಖೆಗೆ ಈಗ ನೀಡುತ್ತಿರುವ ಅನುದಾನದ ಮೊತ್ತ ಸಾಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಅನುದಾನವನ್ನು ಹೆಚ್ಚಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಡಾ॥ ಮುಮ್ತಾಜ್ ಅಲಿ ಖಾನ್ (ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) :

ಅ) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ ಡಾ.ನಂಜುಂಡಪ್ಪ ವರದಿಯನ್ವಯ ಯಾವುದೇ ಪ್ರತ್ಯೇಕ ಅನುದಾನವನ್ನು ಬಿಡುಗಡೆ ಮಾಡಿರುವುದಿಲ್ಲ.

ಆ) –ಅನ್ವಯಿಸುವುದಿಲ್ಲ–

ಇ) –ಅನ್ವಯಿಸುವುದಿಲ್ಲ–

ಈ) –ಅನ್ವಯಿಸುವುದಿಲ್ಲ–